ಇರಬಹುದು.

ಆದರೆ ಅದು ಈಗ ನಡುಭಾಗವನ್ನು ತಲುಪಿದೆ. ಆಚೆ ದಡ ದೂರ ಉಳಿಯಿತು. ಇನ್ನು ಈಚೆ ದಡವೂ ದೂರವೇ ಉಳಿದಿದೆ. ಆದರೆ ಇದುವರೆಗೆ ಅವಳು ದಡದ ಮೇಲೆ ದೃಷ್ಟಿಯನ್ನು ನೆಟ್ಟು ಈಜುತ್ತಿದ್ದಳು. ಆ ದಡಗಳು ಅವಳಿಗೆ ಹತ್ತಿರದ್ದಾಗಿ ಕಾಣುತ್ತಿದ್ದವು. ಈಗ ಹೊಸ ದಿಕ್ಕುಗಳನ್ನು, ಹೊಸ ದಾರಿಗಳನ್ನು ಹುಡುಕುವ ಶಕ್ತಿಯಾಗಲೀ, ಉತ್ಸಾಹವಾಗಲೀ ಚಾರುವಿನಲ್ಲಿ ಇಲ್ಲ. ಈಗ ಶಕ್ತಿಮೀರಿ ಆ ದಡಕ್ಕೆ ಹೋಗಬೇಕಾಗಿದೆ. ಆದರೆ ಸರ್ ಹೇಳಿದ್ದು ನಿಜ! **Solitariness is unanatural to man's life.** ಆದರೂ ನನ್ನ ಹಾದಿ ಅದೇ ದಿಕ್ಕಿನಲ್ಲಿ ಸಾಗಿದೆ.

ಅವಳು ಎದ್ದು ನಿಂತಳು. ಅವರು ಅವಳನ್ನು ಮೌನವಾಗಿ ನೋಡುತ್ತಿದ್ದರು.

'ಬರುತ್ತೇನೆ ಸರ್...'

'ಉತ್ತರ ಸಿಕ್ಕಿತೇ?'

ಅವಳು ನಕ್ಕಳು.

'ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡುವುದು ಸಾಧ್ಯವಾಗದು ಸರ್. ಅವು ಅನುಭವವನ್ನು ಆಧರಿಸಿ ಇರುತ್ತವೆ.'

ಸೂರ್ಯ ಬಾನಂಚಿಗೆ ಬಂದಿದ್ದಾನೆ. ಅವನು ಮುಳುಗಲು ಇನ್ನು ಸ್ವಲ್ಪವೇ ಸಮಯ ಉಳಿದಿದೆ. ಎಲೆಗಳ ಮೇಲಿನ ಬಂಗಾರವನ್ನು ಅಳಿಸಿ ಹಾಕಲು ಯಾರೂ ಪ್ರಾರಂಭಿಸಿಲ್ಲ.

'ಸ್ವಲ್ಪ ತಡೆ,' ಅವರು ಹೇಳಿದರು. 'ಸೂರ್ಯ ಸಮುದ್ರದಲ್ಲಿ ಸ್ನಾನ ಮಾಡಲು ಇಳಿಯಲಿದ್ದಾನೆ. ಅವನು ರಂಗಪಂಚಮಿ ಆಡಲು ಪ್ರಾರಂಭಿಸಿದ ಬಳಿಕ ಹೋಗುವಿಯಂತೆ.'

ಅವರ ಮಾತು ಕೇಳಿ ಚಾರುವಿನ ತುಟಿಯಲ್ಲಿ ಮಂದಹಾಸ ಅರಳಿತು. ಅದು ಬಹಳ ಹೊತ್ತಿನವರೆಗೆ ಮಾಸದೆ ಉಳಿಯಿತು.


## ಮೀನಾ ಕಾಕೋಡಕರ್

ಆಧುನಿಕ ಕೊಂಕಣಿ ಸಾಹಿತ್ಯದ ಪ್ರಮುಖ ಕಥಾಲೇಖಕಿ. 'ದೊಂಗರ ಚಾವ್ಲಾ', 'ಸಪನ ಫುಲಾಂ' ಮತ್ತು 'ಆಮೀ' ಇವರ ಪ್ರಸಿದ್ಧ ಕಥಾಸಂಕಲನಗಳು. 'ವಾಸ್ತು' ಪ್ರಶಸ್ತಿ ಪಡೆದ ಕಾದಂಬರಿ. ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಪಡೆದಿರುವ ಈ ಲೇಖಕಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ದೊರೆತಿದೆ.

## ಗೀತಾ ಶೆಣೈ

ತಮ್ಮ ಅನುವಾದ ಕಾರ್ಯಗಳ ಮೂಲಕ ಕನ್ನಡ–ಕೊಂಕಣಿ–ಇಂಗ್ಲಿಷ್ ಭಾಷೆಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿರುವ ಲೇಖಕಿ. ಈತನಕ 60ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಮಹಿಳಾ ಅಧ್ಯಯನ ಮತ್ತು ವಿಮರ್ಶಾ ಕ್ಷೇತ್ರದ ಕುರಿತು ವಿಶೇಷ ಆಸಕ್ತಿಯುಳ್ಳವರು.